ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ

ಸಂಖ್ಯೆ: ಸಚುಆ/ಚುನಾವಣೆ/22/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 12.07.2013

ಸಹಕಾರ ಸಂಘಗಳ ಉಪನಿಬಂಧಕರು
ಹಾಗೂ ಜಿಲ್ಲಾ ಚುನಾವಣಾಧಿಕಾರಿ,

_____________________ ಜಿಲ್ಲೆ,

_____________________

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಸಾಮಾನ್ಯ ಚುನಾವಣೆ ನಡೆಸುವ ಕುರಿತು – ಜಿಲ್ಲಾ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸುವ ಕುರಿತು

**ಉಲ್ಲೇಖ:-**
1) ಸಹಕಾರ ಚುನಾವಣಾ ಆಯೋಗದ ಅಧಿಸೂಚನೆ ಸಂ:ಸಚುಆ/ಚುನಾವಣೆ/22/2013-14 ದಿನಾಂಕ:3-7-2013
2) ಸರ್ಕಾರದ ಅಧಿಸೂಚನೆ ಸಂ: ಸಿಒ 14 ಸಿಎಲ್‌ಎಂ 2013 ದಿನಾಂಕ 10-7-2013 ರೀತ್ಯಾ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ಕ್ಕೆ ತಿದ್ದುಪಡಿ ಮಾಡಿರುವಿಕೆ

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ ಅವಕಾಶದಂತೆ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಆಡಳಿತ ಮಂಡಳಿ/ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಕುರಿತು ಸಹಕಾರ ಚುನಾವಣಾ ಆಯೋಗವು ಉಲ್ಲೇಖ (1) ಅಧಿಸೂಚನೆಯಂತೆ ವಿವಿಧ ವರ್ಗಗಳ ಪ್ರಾಥಮಿಕ ಸಹಕಾರ ಸಂಘಗಳು ಚುನಾವಣೆ ನಡೆಸಬೇಕಾದ ದಿನಾಂಕಗಳನ್ನು ಈಗಾಗಲೇ ಕೆಳಕಂಡಂತೆ ಪ್ರಕಟಿಸಿರುತ್ತದೆ.

---- 2

| ಕ್ರಸಂ | ಪ್ರಾಥಮಿಕ ಸಹಕಾರ ಸಂಘಗಳು | ಚುನಾವಣೆ ನಡೆಸಬೇಕಾದ ದಿನಾಂಕ |
|---|---|---|
| 1 | ಹಾಲು ಉತ್ಪಾದಕರ ಸಹಕಾರ ಸಂಘಗಳು | 25-8-2013 |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 1-9-2013 |
| 3 | ಇತರೆ ಸಹಕಾರ ಸಂಘಗಳು (ಕೃಷಿಯೇತರ ಪತ್ತಿನ ಸಂಘಗಳು, ಅರ್ಬನ್ ಬ್ಯಾಂಕುಗಳು ಮತ್ತು ಇತರೆ ಪತ್ತಿನ ಸಂಘಗಳು) | 7-9-2013 / 8-9-2013 |
| 4 | ಇತರೆ ಸಹಕಾರ ಸಂಘಗಳು (ಗ್ರಾಹಕರ ಸಂಘಗಳು, ಇನ್ನಿತರೆ ಎಲ್ಲಾ ಪತ್ತೇತರ ಸಹಕಾರ ಸಂಘಗಳು/ ಇತರೆ ಸಂಘಗಳು) | 15-9-2013 |

ಕರ್ನಾಟಕ ಸರ್ಕಾರವು ಉಲ್ಲೇಖಿತ (2) ರಲ್ಲಿ ಹೊರಡಿಸಿರುವ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ಅನ್ನು ರೂಪಿಸಿದ್ದು, ಸದರಿ ಅಧಿಸೂಚನೆಯನ್ನು 10-7-2013 ರ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಿದ್ದು, ದಿನಾಂಕ 10-7-2013 ರಿಂದ ಜಾರಿಗೆ ಬಂದಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ರ ರೀತ್ಯಾ ನಿಯಮ 14(1) ರಂತೆ ಜಿಲ್ಲಾ ಚುನಾವಣಾಧಿಕಾರಿಯು ಅಧಿನಿಯಮ ಪ್ರಕರಣ 39ಎಎ ರೀತ್ಯಾ ಉಲ್ಲೇಖಿತವಾದಂತೆ ಉದ್ದೇಶಿತ ಚುನಾವಣೆ ಕುರಿತು ನಮೂನೆ XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿನ ಅವಕಾಶದಂತೆ ಸೂಕ್ತ ಕ್ರಮವಿಡಲು ನಿರ್ದೇಶಿಸಲಾಗಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ,**

1. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
2. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ ಪ್ರಾಂತ.
3. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ____________
4. ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು , __________